


### ಮಾಹಿತಿಪೂರ್ಣ 'ಅಣುಶಕ್ತಿ'

'ಅಣುಶಕ್ತಿ' (ಜೂ. 05, ಗುರುರಾಜ ಎಸ್. ದಾವಣಗೆರೆ) ಮುಖಪುಟ ಲೇಖನ ಮಾಹಿತಿಪೂರ್ಣವಾಗಿದೆ. ವೈಜ್ಞಾನಿಕ ಅಂಶಗಳನ್ನು ಬಹಳ ಸರಳವಾಗಿ ನೀಡಿರುವ ಲೇಖಕರಿಗೆ ಧನ್ಯವಾದ. ಭಾರತದಲ್ಲಿ ಅಣುಶಕ್ತಿಯ ಕುರಿತಂತೆ ನೀಡಿರುವ ಸಂಶೋಧಿತ ಮಾಹಿತಿಗಳು ಉಪಯುಕ್ತವಾಗಿವೆ. ಅಣು ವಿದ್ಯುತ್ ಶಕ್ತಿಯ ಸಾಧ್ಯತೆಗಳು ಹಾಗೂ ಅದರ ಪರಿಣಾಮಗಳನ್ನು ನಿಖರವಾಗಿ, ವಿವರವಾಗಿ ನೀಡಿದ್ದಾರೆ. ಶಕ್ತಿ ಸ್ವಾವಲಂಬನೆಯ ಹಾದಿಯಲ್ಲಿ ಭಾರತದ ಹೆಜ್ಜೆಗಳನ್ನೂ ಬಹಳ ವ್ಯವಸ್ಥಿತವಾಗಿ ದಾಖಲಿಸಲಾಗಿದೆ. ಅಣುಶಕ್ತಿ ಉತ್ಪಾದನೆಯ ತಂತ್ರಜ್ಞಾನದ ಮಾಹಿತಿಗಳು, ಫ್ಯಾಕ್ಟ್‌ಶೀಟ್‌ಗಳು ಆಸಕ್ತಿದಾಯಕವಾಗಿವೆ.

—ಚೇತನಾ ಎಂ.ಎಸ್., ಮೈಸೂರು

### ಪರಿಣಾಮಕಾರಿ ಬರಹ

'ಪರಿಷನ್ಮಂದಿರ...' (ಜೂ. 05, ಜಿ.ವಿ. ಆನಂದಮೂರ್ತಿ) 'ವಿಚಾರ ಲಹರಿ' ಕನ್ನಡ ಸಾಹಿತ್ಯ ಪರಿಷತ್ತಿನ ಏಳುಬೀಳುಗಳನ್ನು ಪರಿಣಾಮಕಾರಿಯಾಗಿ ದಾಖಲಿಸಿದೆ. ಲಂಕೇಶ್, ಕಾರ್ನಾಡ್, ತೇಜಸ್ವಿ, ದೇವನೂರು ಮಹಾದೇವ ಮೊದಲಾದ ಸಾಹಿತಿಗಳು ಪರಿಷತ್ತಿನ ಅಸೂಕ್ಷ್ಮ ನಡಾವಳಿಗಳನ್ನು ನೋಡಿ, ಅದರ ಹೊಸತಿಲವರೆಗೂ ಬರಲಿಲ್ಲ ಎಂದು ಹೇಳಿರುವುದು ಸರಿಯಾಗಿಯೇ ಇದೆ. ಆದರೆ ಯಾವುದೇ ವ್ಯವಸ್ಥೆಯನ್ನು ಸರಿಪಡಿಸಲು ವ್ಯವಸ್ಥೆಯೊಳಗಿದ್ದುಕೊಂಡೇ ಹೋರಾಡಬೇಕೇ ಹೊರತು ಅದರಿಂದ ದೂರ ಉಳಿಯುವುದರಿಂದ ವ್ಯವಸ್ಥೆಯ ಲೋಪದೋಷಗಳು ನಿವಾರಣೆಯಾಗದು. ಸಾಹಿತಿಗಳು, ಸಾತ್ವಿಕರು ಗಟ್ಟಿಯಾಗಿ ನಿಂತುಕೊಳ್ಳದೇ ಇದ್ದುದರಿಂದಲೇ ಅಲ್ಲವೆ ಪರಿಷತ್ ಅಸಾಹಿತಿಗಳ ಪಾಲಾಗಿರುವುದು?

—ಸುಘೋಷ ಸ. ನಿಗಳೆ, ಬೆಂಗಳೂರು

### ಆಕರ್ಷಕ ಕಥಾಸರಣಿ

'ನೆಲಗನ್ನಡ ಮಹಾಭಾರತ' (ಹಾಡುಪಾಡು ರಾಮು) ಒಂದು ಆಕರ್ಷಕ, ಸತ್ವಭರಿತ, ನೆಲದೊಡಲ ಕಥಾಸರಣಿ ಆರಂಭವಾಗಿರುವುದು ಸಂತಸ ತಂದಿದೆ. ಗೊತ್ತಿದ್ದ ಕಥೆಯಾದರೂ ಕಥನ ನಿರೂಪಣಾ ಕೌಶಲ, ಬರವಣಿಗೆಯ ಶೈಲಿ ಮತ್ತು ಹೊಸ ಹೊಳಹುಗಳೊಂದಿಗೆ ಈ ಧಾರಾವಾಹಿ ಕುತೂಹಲವನ್ನೂ ಹುಟ್ಟಿಸುತ್ತದೆ.

—ಬಾಲಸುಬ್ರಹ್ಮಣ್ಯ ಕಂಜರ್ಪಣೆ, ಕೊಡಗು



### ವಿಶಿಷ್ಟ ಶೈಲಿ

ಮಹಾಭಾರತದ ಕಥಾಸರಣಿಯ ಧಾರಾವಾಹಿಯು ತನ್ನ ವಿಶಿಷ್ಟ ಶೈಲಿಯಿಂದ ಮೊದಲ ಸಂಚಿಕೆಯಲ್ಲೇ ಗಮನಸೆಳೆಯಿತು. ಘಟನೆಗಳು ಕಣ್ಣ ಮುಂದೆ ನಡೆಯುವಂತೆ ಮೋಹನಪ್ಪನವರು ಪಾತ್ರಗಳನ್ನು ರೂಪಿಸಿದ್ದಾರೆ. ತುಂಬಾ ಒಳ್ಳೆಯ ಪ್ರಯತ್ನ.

—ಭಾರತೀ ಗಂಗಾಧರ್, ಬೆಂಗಳೂರು

### ವಿದ್ಯಾ ಬಾಲನ್ ಪತಿ ಸಿದ್ಧಾರ್ಥ್

ನೇಪಥ್ಯಕ್ಕೆ ಸರಿದ ನಾಯಕಿ ಪ್ರಧಾನ ಕಥನ (ಜೂ. 05) ಎಂಬ 'ಬಾಲಿವುಡ್' ಕುರಿತ ಸುದ್ದಿಯಲ್ಲಿ ನಟಿ ವಿದ್ಯಾ ಬಾಲನ್ ಅವರ ಪತಿ ಹೆಸರು ವಿಧು ವಿನೋದ್ ಚೋಪ್ರಾ ಎಂದು ತಪ್ಪಾಗಿ ಪ್ರಕಟವಾಗಿದೆ. ಅವರ ಪತಿ ಹೆಸರು ಸಿದ್ಧಾರ್ಥ್ ರಾಯ್ ಕಪೂರ್.

—ಆರ್.ಟಿ. ಶರಣ್, ಕಲಬುರಗಿ

### ಸ್ಫೂರ್ತಿದಾಯಕ

'ಅಡುಗೆ ಧ್ಯಾನ; ಬದುಕು ಚಿನ್ನ' (ಜೂ. 05, ಜ್ಯೋತಿ ಇರ್ವತ್ತೂರು) ಇಸ್ಮಾಯಿಲ್ ಅವರ ಕುರಿತ ಬರಹ ಸ್ಫೂರ್ತಿದಾಯಕವಾಗಿದೆ. ನಿರುದ್ಯೋಗಿ ಯುವಜನತೆಗೆ ಆದರ್ಶಪ್ರಾಯ.

—ವಿಜಯಕುಮಾರ್, ಕಳಸ

### ಪ್ರೇರಣೆ ನೀಡಿತು

ಬಂಟ್ವಾಳದ ಇಸ್ಮಾಯಿಲ್ ಅವರ ಸಾಧನೆಯ ಕಥನ ಯುವಕರಿಗೆ ಪ್ರೇರಣೆ ತುಂಬುವಂತಿದೆ. 'ಮಾನವೀಯತೆ ಎಲ್ಲಕ್ಕೂ ಮೊದಲು' ಅನ್ನುವ ಅವರ ಮನೋಭಾವ ಮತ್ತು ಇತರರಿಗೆ ಸಹಾಯ ಮಾಡುವ ಉಮೇದು ಅನುಕರಣೀಯ.

— ಕುಚ್ಚಣ್ಣ ಶ್ರೀನಿವಾಸನ್

### ನಾನೂ ಭೇಟಿ ನೀಡುವೆ

'ತುಲಾ ಭವನ; ತೂಕ ಅಳತೆಗಳ ಅಪೂರ್ವ ಜಗತ್ತು' (ಜೂ. 05, ಸುಮಾ ಬಿ.) ಹವ್ಯಾಸ ಲೇಖನ ಓದಿದ ನಂತರ ಭಲೇ ಬಸವರಾಜ ಎಂದು ಅವರನ್ನು ಶ್ಲಾಘಿಸಬಹುದು ಎನಿಸಿತು. ಖಂಡಿತ 'ತುಲಾ ಭವನ'ಕ್ಕೆ ಭೇಟಿ ನೀಡುತ್ತೇನೆ.

—ಜಗದೀಶ ಬಿ. ಹೊಸೂರು, ಮೈಸೂರು

### ಯುವಪೀಳಿಗೆಗೆ ದಾರಿದೀಪ

'ಮಹಾದಾನಿ' (ಜೂ. 05, ಪ್ರವೀಣ ಕುಲಕರ್ಣಿ) ಸೆಲೆಬ್ರಿಟಿ ಅಂಕಣದಲ್ಲಿ ಅಜೀಂ ಪ್ರೇಮ್‌ಜಿ ಅವರ ಕುರಿತ ಬರಹ ಸೊಗಸಾಗಿದೆ. ಸಮಾಜವನ್ನು ಸಶಕ್ತವಾಗಿ ಕಟ್ಟಲು ತಮ್ಮ ಸಂಪತ್ತನ್ನು ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಿಗೆ ಖರ್ಚು ಮಾಡುತ್ತಾ ಸಮಾಜಕ್ಕೆ ಬೆಳಕಿನ ದಾರಿ ತೋರಿದ ಅಜೀಂ ಪ್ರೇಮ್‌ಜಿಯವರ ಸಾಧನೆ ಮುಂದಿನ ಪೀಳಿಗೆಗೆ ದಾರಿ ದೀಪವಾಗಲಿ.

—ಟಿ. ಶಿವಮೂರ್ತಿ ಉಪ್ಪಾರ, ಚಾಮರಾಜನಗರ

### ತಕ್ಕ ನಿದರ್ಶನ



'ಹೆರಾಲ್ಡ್ ವಾಷಿಂಗ್ಟನ್ ಗ್ರಂಥಾಲಯ; ಪುಸ್ತಕ ಸಂಸ್ಕೃತಿಯ ಜೀವಂತ ಕಲಾಕೃತಿ' (ಜೂ. 05, ಡಾ. ಟಿ.ಎಸ್. ಚನ್ನೇಶ್) ಲೇಖನ ಬಹಳ ಖುಷಿ ಕೊಟ್ಟಿತು. ಗ್ರಂಥಾಲಯದ ರಚನೆ, ಪರಿಕಲ್ಪನೆ, ಉದ್ದೇಶ ಹಾಗೂ ಓದುವ ಅಭಿರುಚಿ ಬೆಳೆಸಲು ತಕ್ಕುದಾದ ವಿನ್ಯಾಸಗಳನ್ನು ಕಂಡು ಅಚ್ಚರಿಯಾಯಿತು. ಗ್ರಂಥಾಲಯದ ಸ್ವರೂಪ ಹೇಗಿರಬೇಕು ಎಂಬುದಕ್ಕೆ ತಕ್ಕ ನಿದರ್ಶನ.

—ಯೋಗಿಣಿ ಎಂ., ಬೆಂಗಳೂರು

### ಮಾರ್ಗದರ್ಶಿ

'ಕರಿಯರ್ ಕೌನ್ಸಿಲಿಂಗ್' (ಮೇ 29, ಅನಿತಾ ನಾಡಿಗ್) ಉತ್ತಮ ಮಾರ್ಗದರ್ಶನ ನೀಡಿದ ಲೇಖನ. ಮುಂದಿನ ಓದಿನ ಬಗ್ಗೆ ಮಕ್ಕಳಿಗೆ ಹಾಗೂ ಪೋಷಕರಿಗೆ ಗೊಂದಲಗಳಿದ್ದಾಗ ಈ ರೀತಿ ಪರಿಣತರಿಂದ ಕೌನ್ಸಿಲಿಂಗ್ ಮೂಲಕ ಪರಿಹಾರ ಕಂಡುಕೊಳ್ಳುವುದು ಸೂಕ್ತ.

—ಭಾಗ್ಯಲಕ್ಷ್ಮಿ, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in